ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.

ಸಿ.ಸಿ. ಸಂಖ್ಯೆಃ 496/2018 CW-1 PW- 1

| | |
|---|---|
| ಹೆಸರು | ಮಿರ್ಜಾ ಆಸೀಫ್ ಬೇಗ್ |
| ತಂದೆಯ ಹೆಸರು | ಮಿರ್ಜಾ ಅಜೀಮ್ ಬೇಗ್ |
| ವಯಸ್ಸು | 35 |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ಮಾನವಿ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 27-06-2024

<u>ಮುಖ್ಯ ವಿಚಾರಣೆಃ ಸ ಸ ಅ ಅವರಿಂದ</u>

ಚಾ.ಸಾ. 4 ನನ್ನ ಸಹೋದರ. ಚಾ.ಸಾ. 5 ಮತ್ತು 6 ಗೊತ್ತು. ಆರೋಪಿತರು ಗೊತ್ತು. ದಿ: 20-01-2018 ರಂದು ಮ. 12.30 ಕ್ಕೆ ನಮಗೆ ಸೇರಿದ ಬಾಬಾ ನಾಯಕ ಕಾಲೋನಿಯಲ್ಲಿ ರೈಸ್ ಮಿಲ್‌ಡಿ ಹತ್ತಿರ ಕಂಪೌಂಡ್ ಗೋಡೆ ಕಟ್ಟುತ್ತಿದ್ದಾಗ, 1 ನೇ ಆರೋಪಿ ಬಂದು ಆಸ್ತಿ ನನಗೆ ಸೇರಿದ್ದು ಎಂದು ಹೇಳಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಿರುತ್ತಾನೆ. ನಂತರ 1 ನೇ ಆರೋಪಿ ನನಗೆ ಸೂಳೇ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ನನ್ನ ಬಲಪಕ್ಕೆಗೆ ಹೊಡೆದು ಒದ್ದಿರುತ್ತಾನೆ. 2 ರಿಂದ 4 ನೇ ಆರೋಪಿತರು, ಇವನದ್ದು ಬಹಳ ಆಗಿರುತ್ತದೆ, ಮುಗಿಸಿಬಿಡಿ ಎಂದು 1 ನೇ ಆರೋಪಿತನಿಗೆ ಪ್ರಚೋದನೆ ನೀಡುತ್ತಿದ್ದರು. ಆರೋಪಿತರು ನನ್ನನ್ನು ಹಿಡಿದು ಎಳೆದಾಡಿರುತ್ತಾರೆ. ಚಾ.ಸಾ. 5 ಮತ್ತು 6 ಜಗಳ ಬಿಡಿಸಿಕೊಂಡಿರುತ್ತಾರೆ. ನಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವಾಗ ಪೋಲೀಸರು ಬಂದು ನನ್ನ ದೂರು ಪಡೆದಿರುತ್ತಾರೆ. ನಾನು ನೀಡಿದ ದೂರು ನೋಡುತ್ತಿದ್ದು, ಅದನ್ನು

ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು. ನಾನು ಆ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲು : ಆರೋಪಿತರ ಪರ ಶ್ರೀ. ಎಸ್.ಟಿ.ಹೆಚ್. ವಕೀಲರಿಂದ

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ಮೌಖಿಕವಾಗಿ ದೂರನ್ನು ನೀಡಿರುತ್ತೇನೆ. ನಾನು ಮ. 3.00ಕ್ಕೆ ದೂರು ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮರುದಿನ ಬೆಳಗ್ಗೆ ಬಿಡುಗಡೆಗೊಂಡಿರುತ್ತೇನೆ. ಜಗಳದ ನಂತರ ನನ್ನನ್ನು ಆಸ್ಪತ್ರೆಗೆ ಮ. 1.00ರ ಸುಮಾರಿಗೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮ ಕುಟುಂಬದಲ್ಲಿ ಕಾರುಗಳು ಹಾಗೂ ಇನ್ನಿತರ ವಾಹನಗಳು ಇವೆ ಎಂದರೆ ಸರಿ. ನನ್ನನ್ನು ಆ ದಿನ ಆಸ್ಪತ್ರೆಗೆ ಕರೆದುಕೊಂಡು ಹೋದ ಆಟೋ ಚಾಲಕನ ಹೆಸರು ನೆನಪಿಲ್ಲ. ಆ ದಿನ ನನ್ನೊಂದಿಗೆ ಚಾ.ಸಾ. 4 ರಿಂದ 6 ಬಂದಿದ್ದರು. ನಮಗೆ ಸೇರಿದ ಆಸ್ತಿಯ ವಿವರ ಮತ್ತು ನಂಬರ್ ದೂರಿನಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ಆಸ್ತಿ ನನ್ನ ಸಹೋದರನ ಹೆಸರಿನಲ್ಲಿತ್ತು, ಆ ಬಗ್ಗೆ ದೂರಿನಲ್ಲಿ ಹೇಳಿಲ್ಲ. ಆಸ್ತಿಯ ದಾಖಲೆಗಳನ್ನು ದೂರಿನೊಂದಿಗೆ ಸಲ್ಲಿಸಿಲ್ಲ.

ಆಸ್ತಿಯ ವಿಷಯವಾಗಿ ನನ್ನ ಸಹೋದರ, 2ನೇ ಆರೋಪಿ, ಪ್ರೇಮ್ ಮತ್ತು ಬ್ಯಾಂಕಿನವರ ವಿರುದ್ಧ ಸಲ್ಲಿಸಿರುತ್ತಾನೆ. ಸದರಿ ಪ್ರಕರಣದ ಮೂಲ ದಾವೆಯ ಸಂಖ್ಯೆ ಬಗ್ಗೆ ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ವಾಹ ಪತ್ರದ ಪ್ರತಿಯನ್ನು ದೂರಿನೊಂದಿಗೆ ಹಾಜರುಪಡಿಸಿಲ್ಲ, ಆದರೆ ನಂತರ ಪೋಲೀಸರಿಗೆ ನೀಡಿರುತ್ತೇನೆ. 2ನೇ ಆರೋಪಿ ನನ್ನ ಸಹೋದರನ ವಿರುದ್ಧ ಆಸ್ತಿಯ ಕುರಿತು ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ಕಂಪೌಂಡ್ ಗೋಡೆಯ ಚೆಕ್‌ಬಂದಿ ಹೇಳಲು ಬರುತ್ತದೆ.

ಪಂಚನಾಮೆಯಲ್ಲಿ ನಮಗೆ ಸೇರಿದ ಆಸ್ತಿ ಇಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಉತ್ತರ ದಿಕ್ಕಿಗೆ ಹೊಸದಾಗಿ ಕಟ್ಟುತ್ತಿರುವ ಕಂಪೌಂಡ್ ಅದರ ಆಚೆ ನಮ್ಮ ಆಸ್ತಿ ಎಂದು ಬರೆದಿರುತ್ತಾರೆ ಎಂದರೆ ಸರಿ. ಪಂಚನಾಮೆ ಅಡಿಯಲ್ಲಿ ತೋರಿಸಿದ ಚಕ್?ಬಂದಿಯಲ್ಲಿ ನಮಗೆ ಸೇರಿದ ಆಸ್ತಿ ಇಲ್ಲ ಅಂದರೆ ಸರಿಯಲ್ಲ. ಫ್ರೆಮ್?ರೈಸ್? ಮಿಲ್?2 ನೇ ಆರೋಪಿ ಖರೀದಿಸಿರುತ್ತಾನೆ ಹಾಗೂ ಅದು ಅವರ ವಶದಲ್ಲಿ ಇದೆ ಅಂದರೆ ಸರಿ. ಘಟನೆ ನಡೆದಿದೆ ಎಂದು ಹೇಳಿದ ಸ್ಥಳವು ಯಾವಗಲೂ ಜನರಿಂದ ಕೂಡಿರುತ್ತದೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಸಾರ್ವಜನಿಕ ರಸ್ತೆ ಇದೆ ಅಂದರೆ ಸರಿ. ಜಗಳ ನಡೆದಿದೆ ಎಂದು ಹೇಳಿದ ಸ್ಥಳದಲ್ಲಿ ಸುಮಾರು 30 ರಿಂದ 40 ಜನರು ನೆರೆದಿದ್ದರು. ಅವರ ಹೇಸರು ಹೇಳಲು ಬರುವುದಿಲ್ಲ. ಚಾಸಾ-3 ಮತ್ತು 5 ನಮ್ಮ ಗ್ಯಾರೇಜ್?ನಲ್ಲಿ ಕೆಲಸ ಮಾಡುತ್ತಾರೆ ಅಂದರೆ ಸರಿಯಲ್ಲ. ಚಾಸಾ-6 ನನ್ನ ಗೆಳೆಯ ಅಂದರೆ ಸರಿಯಲ್ಲ. ಚಾಸಾ-3 ಮತ್ತು 4 ನನ್ನ ಅಧಿನದಲ್ಲಿ ಕೆಲಸ ಮಡುತ್ತಿದ್ದರು ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಚಾಸಾ-2 ನನ್ನ ಗ್ರಾಹಕ ಅಂದರೆ ಸರಿಯಲ್ಲ. ನನ್ನ ಸಹೋದರ ಆದಮ್? ಬೇಗ್?ಕಾಂಗ್ರೇಸ್?ಪಕ್ಷದ ಪ್ರಭಾವಿ ಮುಖಂಡ ಅಂದರೆ ಸರಿ. 2 ನೇ ಆರೋಪಿ 1 ನೇ ದರ್ಜೆಯ ಗುತ್ತಿಗೆದಾರ ಅಂದರೆ ಸರಿ. 3 ನೇ ಆರೋೀಪಿ ಲಾರಿಯ ಟ್ರಾನ್ಸ್ ಪೋರ್ಟ್ ವ್ಯವಹಾರ ಮಾಡುತ್ತಾನೆ ಅಂದರೆ ಸರಿ. 1 ನೇ ಆರೋೀಪಿ ಮೇಸನ್? ಕೆಲಸ ಮಾಡುತ್ತಾನೆ ಅಂದರೆ ಸರಿಯಲ್ಲ. 4 ಜನ ಆರೋಪಿತರು ಬೇರೆ ಕಡೆ ವಾಸ ಇರುವುದರಿಂದ ನನ್ನ ಜೊತೆ ಒಟ್ಟಾಗಿ ಜಗಳ ಮಾಡುವ ಪ್ರಶ್ನೆ ಬರುವುದಿಲ್ಲ ಅಂದರೆ ಸರಿಯಲ್ಲ. ದಿಃ 21-01-2018 ರಂದು ಮಾನ್ವಿ ಪಟ್ಟಣದ ಬಾಬಾನಾಯ್ಕ ಕಾಲೋನಿಯಲ್ಲಿ ಕೌಂಪೌಡ್? ಕಟ್ಟಡ ಕಟ್ಟುತ್ತಿರುವಾಗ 1 ನೇ ಆರೋಪಿ ಬಂದು ನನ್ನೊಂದಿಗೆ ಜಗಳ ತೆಗೆದು ಅವಾಚ್ಯವಾಗಿ ಕೈಯಿಂದ ನನ್ನ ಬಲ ಪಕ್ಕಕ್ಕೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಇತರೇ ಆರೋಪಿತರು 1 ನೇ ಆರೋಪಿತನಿಗೆ ಪ್ರಚೋದನೆ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಆರೋಪಿತರು ನನಗೆ ಖಲಾಸ್?ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಭೇಟಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಆರೋಪಿತರ ಮತ್ತು ನನ್ನ ಸಹೋದರ ಆದಾಮ್?ಬೇಗ ಇವರ ಮಧ್ಯೆ ಸಂಬಂಧ ಚೆನ್ನಾಗಿ ಇರದೇ ಇರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಮಾನವಿ.